ಅಧಿಕಾರಿಗಳಲ್ಲಿ ಅಕೌಂಟಬಿಲಿಟಿ ಬೇಕು. ಯಾರು ತಪ್ಪನ್ನು ಎಸಗಿದ್ದಾರೆ, ಆ ಅಧಿಕಾರಿಗಳ ಬಗ್ಗೆಯೂ ಕೂಡ ನಾನು ಕ್ರಮವನ್ನು ಜರುಗಿಸುತ್ತೇನೆ. ಆ ಕಟ್ಟಡವನ್ನು ಆದಷ್ಟು ಬೇಗ ಮುಗಿಸಿ ನಮ್ಮ ಇಲಾಖೆಯ ಸೇವೆಗಾಗಿ ಅದನ್ನು ಒದಗಿಸಿಕೊಡುತ್ತೇನೆ. ತಮ್ಮ ಕಳಕಳಿ ನನಗೆ ಅರ್ಥವಾಗಿದೆ. ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿ ನಿಮಗೆ ಮತ್ತೆ ಯಾತ್ತೆ ಭರವಸೆಯನ್ನು ಕೊಡುತ್ತೇನೆ. ನಾನು ಮೂರು ವರ್ಷದ್ದು ಜವಾಬ್ದಾರಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅದು ತಮಗೆ ಗೊತ್ತಿದೆ.

ರಾಜ್ಯದಲ್ಲಿ ಪತ್ರಿಕಾ ಮಂಡಳಿ ಸ್ಥಾಪನೆ.

175(2174)

ಶ್ರೀ ಎಸ್ಟೇಶ್ವರ ಹಗಡೆ ಕಾಗೇರಿ (ಅಂಕೋಲ): ಮಾನ್ಯ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪತ್ರಿಕಾ ಮಂಡಳಿ ಸ್ಥಾಪನೆಯ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ಸ್ಥಾಪಿಸಲಾಗುವುದೇ ಮತ್ತು ಯಾವಾಗ ಸ್ಥಾಪಿಸಲಾಗುವುದು?

ಪ್ರೊ. ಬಿ.ಕೆ.ಚಂದ್ರಶೇಖರ್(ವಾರ್ತಾ ರಾಜ್ಯ ಸಚಿವರು):

ಅ) ಬಂದಿದೆ.

ಆ) ಇದರ ಸ್ಥಾಪನೆಯ ಬಗ್ಗೆ ವಿಚಾರ ವಿನಿಮಯ ನಡೆಯುತ್ತಿದೆ. ರಾಷ್ಟ್ರ ಮಟ್ಟದಲ್ಲಿ ರಚಿತವಾಗಿರುವ ಪತ್ರಿಕಾ ಮಂಡಳಿಯು ಕೇವಲ ಮುದ್ರಣ ಮಾಧ್ಯಮಕ್ಕಷ್ಟೇ ಸೀಮಿತವಾಗಿದೆ. ಬೆಳೆಯುತ್ತಿರುವ ವಿದ್ಯುನ್ಮಾನ ಮಾಧ್ಯಮಗಳ ಬಗ್ಗೆಯೂ ಈ ಮಂಡಳಿಯ ಪರವು ವಿಸ್ತಾರವಾಗಬೇಕು ಎನ್ನುವ ಅಭಿಪ್ರಾಯ ವ್ಯಕ್ತವಾಗಿದೆ. ಈ ಎಲ್ಲಾ ವಿಚಾರಗಳನ್ನು ಕ್ರೋಢೀಕರಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು.

ಶ್ರೀ ಎಸ್ಟೇಶ್ವರ ಹಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ನನ್ನ (ಅ) ಪ್ರಶ್ನೆಗೆ ರಾಜ್ಯದಲ್ಲಿ ಪತ್ರಿಕಾ ಮಂಡಳಿಯ ಸ್ಥಾಪನೆಯ ಅವಶ್ಯಕತೆ ಇದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಯಾವಾಗ ಸ್ಥಾಪನೆ ಮಾಡುತ್ತೀರಿ ಎಂದು ಕೇಳಿದ್ದಕ್ಕೆ ರಾಷ್ಟ್ರಮಟ್ಟದಲ್ಲಿ ಮುದ್ರಣ ಮಾಧ್ಯಮಕ್ಕೆ ಅಷ್ಟೇ ಅಲ್ಲ, ಪ್ರಿಂಟ್

ಮಾಡಿಯಾಕ್ಕೆ ಮಾತ್ರ ಈ ಒಂದು ಪತ್ರಿಕಾ ಮಂಡಳಿ ಸ್ಥಾಪನೆಯಾಗಿದೆ. ಅದರಲ್ಲಿ ವಿದ್ಯುನ್ಮಾನ ಮಾಧ್ಯಮದ ಬಗ್ಗೆಯೂ ಸಹಾ ಸೇರಿಸಿಕೊಂಡು ನಾವು ಇಲ್ಲಿ ಒಂದು ಪತ್ರಿಕಾ ಮಂಡಳಿಯನ್ನು ಸ್ಥಾಪನೆ ಮಾಡುವುದರ ಬಗ್ಗೆ ಪರಿಶೀಲಿಸುತ್ತಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ಸರ್ಕಾರಕ್ಕೆ ಈಗಾಗಲೇ ರಾಜ್ಯದಲ್ಲಿ ಪೀತ ಪತ್ರಿಕೋದ್ಯಮ ಬೆಳೆಯುತ್ತಿರುವುದು ಮತ್ತು ಜಿಲ್ಲಾ ಮಟ್ಟಕ್ಕೂ ಸಹಾ ಇವತ್ತು ವಿಸ್ತರಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ? ಅದಲ್ಲದೆ ಈ ಜಾಹಿರಾತಿನಲ್ಲಿ ಮುದ್ರಣದ ಸಮಸ್ಯೆಯಲ್ಲಿ, ಕಾಗದದ ಸಮಸ್ಯೆಗಳಲ್ಲಿ ಮತ್ತು ಕೆಲವು ಭಾಷೆಗಳ ಪತ್ರಿಕೆಗಳಿಗೆ ಪ್ರೋತ್ಸಾಹ ಕೊಡುವುದರ ಬಗ್ಗೆ ಈ ಒಂದು ಪತ್ರಿಕಾ ಮಂಡಳಿಯ ಸ್ಥಾಪನೆ ಇದನ್ನು ತುರ್ತಾಗಿ ತರಬೇಕೆನ್ನುವುದರ ಬಗ್ಗೆ ಸರ್ಕಾರವೇನು ಯೋಚನೆ ಮಾಡುತ್ತಿದೆ ಎಂದು ಹೇಳಬೇಕು. ಮಾನ್ಯ ಶಾಸಕರಾದ ಪಿ.ರಾಮಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸರ್ಕಾರ ರಚನೆ ಮಾಡಿತ್ತು. ಅವರು ವರದಿಯನ್ನು ಕೊಟ್ಟಿದ್ದಾರೆ. ಆ ವರದಿ ವಾರ್ತಾ ಇಲಾಖೆಗೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಅವರು ಅದರ ಬಗ್ಗೆ ಏನು ಪರಿಶೀಲನೆ ಮಾಡಿದ್ದಾರೆ? ಮತ್ತು ವಿದ್ಯುನ್ಮಾನ ಮಾಧ್ಯಮವನ್ನು ಸೇರಿಸಿಕೊಂಡು ಮತ್ತು ತಕ್ಷಣದಲ್ಲಿ ಇದು ಆಗಬೇಕಾದ ಅಗತ್ಯ ಇದೆ. ಇದನ್ನು ಯಾವಾಗ ರಚನೆ ಮಾಡುತ್ತೀರಿ ಎನ್ನುವ ವಿವರಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರೊ: ಬಿ.ಕೆ.ಚಂದ್ರಶೇಖರ್: ಮಾನ್ಯ ಅಧ್ಯಕ್ಷರೇ, ನಾವು ರಾಜ್ಯಮಟ್ಟದ ಪತ್ರಿಕಾ ಮಂಡಳಿಯನ್ನು ಮಾಡುತ್ತೇವೆಂದು ಇದರಲ್ಲಿ ಹೇಳಿಲ್ಲ. ನಾವು ಏನು ಹೇಳಿದ್ದೇವೆಂದರೆ ಇಡೀ ರಾಷ್ಟ್ರದಲ್ಲಿ ಈ ವಿಚಾರ ಚರ್ಚೆಯಾಗುತ್ತಿದೆ. ಸನ್ಮಾನ್ಯ ರಾಮಯ್ಯನವರು ಕೊಟ್ಟರುವ ವರದಿಯಲ್ಲಿ ಒಂದು ಶಿಫಾರಸ್ಸು ಇದೆ. ರಾಜ್ಯಮಟ್ಟದಲ್ಲೂ ಮಾಡಬಹುದು ಎಂದು. ಆದರೆ ರಾಷ್ಟ್ರಮಟ್ಟದಲ್ಲಿರುವ ಮಂಡಳಿಯ ಅಧ್ಯಕ್ಷರಾದ ಜಸ್ಟೀಸ್ ಸಾವಂತ್‌ರವರು ಹೇಳುತ್ತಾರೆ. ಇದರ ಅವಶ್ಯಕತೆ ಏನು ಎಂದು ನಮಗೆ ಗೊತ್ತಾಗುತ್ತಿಲ್ಲ. ರಾಜ್ಯಮಟ್ಟದಲ್ಲಿ ಏಕೆ ಮಾಡಬೇಕೆಂದು ಕೇಳಿದ್ದಾರೆ. ಒಂದೂವರೆ ತಿಂಗಳ ಹಿಂದೆ ಮೊನ್ನೆ ಬೆಂಗಳೂರಿಗೆ ಬಂದಾಗಲೂ ಕೂಡ ಈ ವಿಚಾರವನ್ನು ಅವರು ಹೇಳಿದರು. ವ್ಯಾಪಕವಾಗಿ ಇದು ಚರ್ಚೆಯಾಗುತ್ತಿದೆ. ಇದು ರಾಜ್ಯಮಟ್ಟದಲ್ಲಿ ಚರ್ಚೆ ಆಗಬೇಕೆನ್ನುವುದು ಮೊದಲ ವಿಚಾರ. ಎರಡನೆಯದು ಒಂದು ಪಕ್ಷ ಇಲ್ಲ ಸ್ಥಾಪನೆ ಮಾಡಬೇಕೆನ್ನುವುದಾದರೆ ವಿದ್ಯುನ್ಮಾನ ಮಾಧ್ಯಮವನ್ನು ಸೇರಿಸಬೇಕೇ ಎನ್ನುವುದು ಸಪ್ಲಿಮೆಂಟ್ ಪಾಯಿಂಟ್ ಇದೆ. ಅದರ ಬಗ್ಗೆ ಎಕ್ಸಾಮಿನ್ ಮಾಡುತ್ತಿದ್ದೇವೆ. ಅದರಿಂದ ಯಾವ ನಿರ್ಧಾರಕ್ಕೂ ಬಂದಿಲ್ಲ. ಆದರೆ ಬಹಳ ಪ್ರಚಲಿತವಾಗಿ ಚರ್ಚೆಯಾಗುತ್ತಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ಅನೇಕ ಸಂಗತಿಗಳು ಪತ್ರಿಕಾ ಕ್ಷೇತ್ರದಲ್ಲಿ ನಡೆಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಪತ್ರಿಕಾ ಕ್ಷೇತ್ರ

ಪ್ರಜಾಪ್ರಭುತ್ವದ ನಾಲ್ಕನೆಯ ಅಂಗ ಎಂದು ಕರೆಸಿಕೊಂಡಿರುವಷ್ಟು ಪ್ರಾಮುಖ್ಯವಾಗಿರುವ ಕ್ಷೇತ್ರ. ಹಾಗಾಗಿ ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಬಂದಂತೆ ಅದರಲ್ಲೂ ಆದರ್ಶಗಳು ಮೌಲ್ಯಗಳು ಕಡಿಮೆಯಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ನಿಮ್ಮ ಜಿಲ್ಲಾಧಿಕಾರಿಗಳೇ ಒಂದು ಪತ್ರಿಕೆಯನ್ನು ನೋಂದಣಿ ಮಾಡಬೇಕೆಂದರೆ ಅವರೇ ಶಿಫಾರಸ್ಸು ಮಾಡಬೇಕು. ರಾಜ್ಯದಲ್ಲಿ ಆಗುವ ಎಲ್ಲಾ ಆಗುಹೋಗುಗಳ ಬಗ್ಗೆ ಎಲ್ಲರೂ ದೆಹಲಿಗೆ ಹೋಗಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಕೇಂದ್ರ ಪತ್ರಿಕಾ ಮಂಡಳಿಯ ಮುಂದೆ ಹೋಗುವುದಕ್ಕಾಗುವುದಿಲ್ಲ. ಎಲ್ಲರೂ ದೆಹಲಿಗೆ ಹೋಗಿ ಅಲ್ಲಿ ದೂರನ್ನು ಸಲ್ಲಿಸುತ್ತಾ ಕುಳಿತುಕೊಳ್ಳುವುದು ಕಷ್ಟವಾಗುತ್ತದೆ. ಇತ್ತೀಚೆಗೆ ನಾವು ನೋಡುತ್ತಿದ್ದಂತೆ ವ್ಯಕ್ತಿಗತ ಆರೋಪ ಬರುವಂಥ ಲೇಖನಗಳು ಹೆಚ್ಚಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಸತ್ಯಾಂಶ ಇದ್ದರೆ ಯಾರು ತಪ್ಪಿತಸ್ಥರು ಇದ್ದಾರೋ ಅವರಿಗೆ ಶಿಕ್ಷೆಯಾಗಬೇಕು. ಅದು ಬೇರೆ. ಆದರೆ ವೃಥಾ ಒಬ್ಬ ವ್ಯಕ್ತಿಯನ್ನು, ಅಥವಾ ಒಂದು ಸಂಘ ಸಂಸ್ಥೆಯನ್ನು ಅಥವಾ ಒಂದು ವಿಷಯವನ್ನು ಕಲುಷಿತ ಮಾಡುವಂಥ, ಅಥವಾ ಅದರ ಬಗ್ಗೆ ಅಪಪ್ರಚಾರ ಮಾಡುವಂಥ ಒಂದು ಭಾಗದ ಪತ್ರಿಕೋದ್ಯಮ ನಡೆಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಹಾಗೆ ರಾಜ್ಯಕ್ಕೂ ಜವಾಬ್ದಾರಿ ಇದೆ, ಪತ್ರಿಕಾ ಮಂಡಳಿಯನ್ನು ಮಾಡುವಂಥದ್ದು. ನೀವು ಕೇಂದ್ರದ ಸಲಹೆ ಸೂಚನೆಗಳನ್ನು ಪಡೆಯಿರಿ. ಆದರೆ ರಾಜ್ಯಸರ್ಕಾರ ಮುಂದಿದ್ದು ಈ ಪತ್ರಿಕಾ ಮಂಡಳಿಯನ್ನು ಮಾಡಬೇಕಾದ ಅಗತ್ಯ ಇದೆ ಎಂದು ಇವತ್ತು ಆ ಕ್ಷೇತದಲ್ಲಿರುವಂಥ ಪ್ರಮುಖರೂ ಹೇಳುತ್ತಿದ್ದಾರೆ. ಇವತ್ತು ಸಮಾಜದಲ್ಲೂ ಅದರ ಅಗತ್ಯತೆಯ ಬಗ್ಗೆ ಮನವರಿಕೆಯಾಗುತ್ತಿರುವ ಸಂದರ್ಭದಲ್ಲಿ ಇದು ಕೇವಲ ಪರಿಶೀಲನೆಯ ಹಂತದಲ್ಲಿ ಕೇಂದ್ರದ ಜೊತೆಗೆ ಮಾತನಾಡುವ ಹಂತದಲ್ಲಿರಬಾರದು. ಎಲ್ಲಾರೂ ಕೇಂದ್ರಕ್ಕೆ ಹೋಗಿ ದೂರನ್ನು ಸಲ್ಲಿಸುವುದಕ್ಕಾಗುವುದಿಲ್ಲ. ವಿಚಾರಣೆಗೆ ಒಳಪಡಿಸುವುದಕ್ಕೂ ಆಗುವುದಿಲ್ಲ. ಆ ರೀತಿ ರಾಜ್ಯದಲ್ಲಿ ತುರ್ತುಪರಿಹಾರಕ್ಕೆ ಪತ್ರಿಕಾ ಮಂಡಳಿಯ ಅಗತ್ಯ ಇದೆ. ಹಾಗಾಗಿ ಇದನ್ನು ರಚಿಸಬೇಕೆನ್ನುವ ಆಗ್ರಹವನ್ನು ನಾನು ಮಾಡುತ್ತಿದ್ದೇನೆ.

ಪ್ರೊ: ಬಿ.ಕೆ.ಚಂದ್ರಶೇಖರ್: ಮಾನ್ಯ ಅಧ್ಯಕ್ಷರೇ, ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ. ಈಗ ಅಖಿಲ ಭಾರತ ಮಟ್ಟದಲ್ಲಿ ಪತ್ರಿಕಾ ಮಂಡಳಿ ಇದೆ. ಅವರಿಗೂ ಕೂಡ ಸಂಪೂರ್ಣ ಅಧಿಕಾರವಿಲ್ಲ. ಮಾನ್ಯ ಸದಸ್ಯರಿಗೆ ಚೆನ್ನಾಗಿ ಗೊತ್ತು. ಎಷ್ಟೇ ದೂರನ್ನು ಅಲ್ಲಿಗೆ ಒಯ್ದರೂ ಕೂಡ ಬಹಳ ಸೀಮಿತವಾದ ಚೌಕಟ್ಟಿನಲ್ಲಿ ಅವರು ಕೆಲಸ ಮಾಡಬೇಕಾಗಿ ಬಂದಿದೆ. ಹಾಗೆ ರಾಜ್ಯಮಟ್ಟದಲ್ಲಿ ಇಂಥ ಪತ್ರಿಕಾ ಮಂಡಳಿಯನ್ನು ಮಾಡಿದಾಗಲೂ ಆಟೊಮ್ಯಾಟಿಕ್ ಆಗಿ ಒಂದು ರೀತಿ ಎಲ್ಲವನ್ನೂ ನಿಯಂತ್ರಿಸಬಹುದೆನ್ನುವ ವಿಶ್ವಾಸ ಅಥವಾ ನಂಬಿಕೆ ಸದ್ಯಕ್ಕೆ ನನಗಿಲ್ಲ. ಇದು ಇಂಡಿಯನ್ ಪೀನಲ್ ಕೋಡ್‌ನಲ್ಲಿ ಕೆಲಸ ಮಾಡಬೇಕಾಗುತ್ತದೆ. ಬಹಳ ದೀರ್ಘವಾಗಿ

ಆಲೋಚನೆ ಮಾಡತಕ್ಕ ಕೆಲಸ ಇದು. ಅವರ ಉದ್ದೇಶವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಮಾನ್ಯ ಸದಸ್ಯರು ಹೇಳಿದ್ದು ನಿಜ. ನನಗೆ ಹಲವಾರು ಶಾಸಕರು ಬಂದು ಹೇಳುತ್ತಾರೆ. ವ್ಯಕ್ತಿಗತವಾಗಿ ಬಾಯಿಗೆ ಬಂದಂತೆ ಮಾತನಾಡಿ ಆರೋಪ ಮಾಡಿ ಬರೆಯುವುದು. ಅವರು ಉತ್ತರ ಕೊಟ್ಟರೆ ಉತ್ತರ ಕೂಡ ಅವರು ಅಚ್ಚಾಕುವುದಿಲ್ಲ. ನಮ್ಮ ಹಲವಾರು ಶಾಸಕರೇ ಬಂದು ಹೇಳಿದ್ದಾರೆ. ಅದನ್ನು ಖಂಡಿತಾ ಒಪ್ಪುತ್ತೇನೆ. ಅದು ನಡೆಯುತ್ತಾ ಇದೆ. ಇದನ್ನು ಎಲ್ಲಾ ಪತ್ರಿಕೆಗಳೂ ಮಾಡುತ್ತಿಲ್ಲ. ಸ್ಥಳೀಯವಾಗಿ ಕೆಲವು ಪತ್ರಿಕೆಗಳು ಈ ಕೆಲಸವನ್ನು ಮಾಡುತ್ತಿವೆ. ಅದರೆ ಅದರ ಬಗ್ಗೆ ನಾವು ಈಗಾಗಲೇ ಈ ಪತ್ರಿಕಾ ಮಂಡಳಿಯ ಜೊತೆ ವ್ಯವಹಾರವನ್ನು ಮಾಡಿ ಅವರ ಜೊತೆ ಚರ್ಚೆ ಮಾಡಿ ಏನಾದರೂ ನಮ್ಮ ಈ ಬೆಜಿಟಮೇಟ್ ಲೀಗಲ್ ಕಂಟ್ರೋಲನ್ನು ಹೆಚ್ಚು ಮಾಡಬಹುದೇ ಎನ್ನುವ ವಿಚಾರವನ್ನೂ ಕೂಡ ನಾವು ಮಾತನಾಡುತ್ತಿದ್ದೇವೆ. ಅದೆಲ್ಲಾ ಗಮನದಲ್ಲಿಟ್ಟುಕೊಂಡು ಇದನ್ನು ಮಾಡೋಣ. ಸುಮ್ಮನೆ ಒಂದು ಮಂಡಳಿ ಎಂದು ಮಾಡಿದರೆ ಅದಕ್ಕೆ ಸಾಕಷ್ಟು ಅಧಿಕಾರ ಇಲ್ಲದೆ ಹೋದರೆ ಉಪಯೋಗವಾಗುವುದಿಲ್ಲವೆನ್ನುವ ದೃಷ್ಟಿಯಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಡಿ.ಪಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೇ, ಉಪವಿಭಾಗ ಕೇಂದ್ರದಲ್ಲಿರುವ ವಾರ್ತಾ ಮತ್ತು ಪ್ರಚಾರ ಇಲಾಖೆ ಉಂಟಲ್ಲ, ಅಲ್ಲಿಯ ಇಲಾಖೆ ಮತ್ತು ಅಧಿಕಾರಿಗಳನ್ನು ನಾವು ಅಲ್ಲಿಂದ ತೆಗೆಯುತ್ತೇವೆ, ಜಿಲ್ಲಾ ಕೇಂದ್ರದಲ್ಲಿ ಮಾತ್ರ ವಾರ್ತಾ ಇಲಾಖೆ ಮತ್ತು ಬಾಕಿ ಇಲಾಖೆಗಳು ಇರುತ್ತವೆ ಎಂದು ಹೇಳುವ ವಿಚಾರಗಳು ಹಲವಾರು ಸಮಯದಿಂದ ಪತ್ರಿಕೆಗಳಲ್ಲಿ ಬರುತ್ತಿವೆ. ಇವರ ಬಗ್ಗೆ ಸರ್ಕಾರದ ನಿಲುವೇನು? ವಾರ್ತಾ ಇಲಾಖೆಯ ಆ ಉಪವಿಭಾಗದಲ್ಲಿರುವಂಥ ಕಛೇರಿಗಳು ಮತ್ತು ಅಲ್ಲಿರುವ ಅಧಿಕಾರಿಗಳನ್ನು ಮುಂದುವರೆಸುತ್ತದೆಯೇ? ಅಥವಾ ಅಲ್ಲಿಂದ ಅವರನ್ನು ರದ್ದುಗೊಳಿಸುವ ಇರಾದೆ ಸರ್ಕಾರಕ್ಕೆ ಇದೆಯೇ? ಅದನ್ನು ಮುಂದುವರೆಸಬೇಕೆನ್ನುವ ಅಗ್ರಹ ನನ್ನದು. ಅದರ ಬಗ್ಗೆ ಸರ್ಕಾರ ನಿಲುವೇನೆಂದು ತಾವು ಹೇಳಬೇಕು.

ಪ್ರೊ: ಬಿ.ಕೆ.ಚಂದ್ರಶೇಖರ್: ಅದರ ಬಗ್ಗೆ ಏಪರ ಬೇಕಾದರೆ ಸದಸ್ಯರು ಬೇರೆ ಒಂದು ಪ್ರಶ್ನೆಯನ್ನು ಕಳುಹಿಸಲಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ರಾಮಯ್ಯ ಸಮಿತಿಯವರು ವರದಿಯನ್ನು ಏನು ಕೊಟ್ಟಿದ್ದಾರೆ, ಅದನ್ನು ಯಾವಾಗ ಜಾರಿಗೆ ಕೂಡುತ್ತೀರಿ? ಅದರಲ್ಲಿರುವಂಥ ಅಂಶಗಳನ್ನು ಯಾವಾಗ ಅನುಷ್ಠಾನಕ್ಕೆ ತರುತ್ತೀರಿ ಎನ್ನುವ ವಿಚಾರಗಳನ್ನು ಮಾನ್ಯ ಸಚಿವರು ಹೇಳಲಿಲ್ಲ. ಮಾನ್ಯ ಏಶ್ವೇಶ್ವರ ಹೆಗಡೆಯವರು ಕೇಳಿದರು, ಅದನ್ನು ಇವರು ಕೈಬಿಟ್ಟರು. ಇವತ್ತು ಏನೂ ಉದ್ಯೋಗ ಸಿಗದಿದ್ದವರು ಕೆಲವರು ಪತ್ರಿಕೆ ಮಾಡುವುದರಿಂದ ಅದನ್ನು ಉದ್ಯೋಗವೆಂದು ಹೇಳಿ

ತಿಳಿದುಕೊಳ್ಳಬಯುದೇ ಏನಹಾ ಅದರ ಒಂದು ವೃತ್ತಿಪಾವಿತ್ರ್ಯತೆಯ ಘನತೆ ಇವತ್ತೇನು ಕೆಳಗೆ ಇಳಿಯುತ್ತಿದೆ. ಇದನ್ನು ರಕ್ಷಣೆ ಮಾಡುವ ದೃಷ್ಟಿಯಿಂದ ಸರ್ಕಾರ ಏನಾದರೂ ಮಾಡಿ ಈ ನಿಟ್ಟಿನಲ್ಲಿ ಗಮನಹರಿಸಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ತಗೆದುಕೊಳ್ಳತಕ್ಕ ಕ್ರಮಗಳೇನು ಎಂದು ಹೇಳಬೇಕು.

ಪ್ರೊ: ಬಿ.ಕೆ.ಚಂದ್ರಶೇಖರ್: ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮಯ್ಯನವರ ವಿಘಾರಸ್ಸುಗಳು ಯಾವ ಹಂತದಲ್ಲಿದೆ, ಏನು ಏನ್ನುವುದನ್ನು ಕೂಡ ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ಉತ್ತಮ ಎನಿಸುತ್ತದೆ. ಹಲವಾರು ವಿಘಾರಸ್ಸುಗಳನ್ನು ಒಪ್ಪಿಕೊಂಡು ಅವುಗಳನ್ನು ಅನುಷ್ಠಾನಕ್ಕೆ ತಂದಿದ್ದೇವೆ. ಏನ್ನು ಕೆಲವು ವಿಘಾರಸ್ಸುಗಳು ಆರ್ಥಿಕ ಇಲಾಖೆಗೆ ಹೋಗಿದೆ. ಅವರ ಒಪ್ಪಂದ ಇಲ್ಲದೆ, ಅವರ ಅನುಮೋದನೆ ಇಲ್ಲದೆ ಮಾಡುವುದು ಕಷ್ಟವಾಗುತ್ತದೆ. ಬಹಳ ದೊಡ್ಡ ವಿಚಾರ ಇದೆ. ಅದರೆ ಸುಮಾರು ವಿಘಾರಸ್ಸುಗಳನ್ನು ಒಪ್ಪಿಕೊಂಡು ಅನುಷ್ಠಾನಕ್ಕೆ ತರುವ ಬಗ್ಗೆ ಗೌರ್ನಮೆಂಟ್ ಆರ್ಡರನ್ನು ಈಗಾಗಲೇ ಮಾಡಿ ಆಗಿದೆ. ನಿಯಂತ್ರಣ ಮತ್ತು ಪತ್ರಿಕೆಗಳ ಅತಿರೇಕವನ್ನು ಏನು ಮಾಡುವುದು ಎಂದು ಪುನ: ತಾವು ಕೇಳಿದ್ದೀರಿ. ನಾನು ಆಗಲೇ ಹೇಳಿದೆ. ಈಗ ನಿರ್ದಿಷ್ಟವಾಗಿ ಒಂದು ಸೀಮಿತ ಚೌಕಟ್ಟಿನಲ್ಲಿ ಮಾತ್ರ ಈ ನಿಯಂತ್ರಣದಲ್ಲಿ ಯಾವುದೇ ಸರ್ಕಾರ ಕೆಲಸ ಮಾಡಬಹುದು. ಅದನ್ನು ದಾಟಿ ಹೋದರೆ ಪತ್ರಿಕಾ ಸ್ವಾತಂತ್ರ್ಯ ಹರಣವಾಗುತ್ತದೆ ಎನ್ನುವ ಬಹಳ ಆಪಾದನೆಗಳು ಬರುತ್ತವೆ. ನಮಗೆ ಗೊತ್ತು. ನಿಮಗೂ ಅದರಲ್ಲಿ ನಂಬಿಕೆ ಇದೆ. ಪತ್ರಿಕಾ ಸ್ವಾತಂತ್ರ್ಯದಲ್ಲಿ ನಮಗೂ ವಿಶ್ವಾಸ ಇದೆ. ಅದನ್ನು ಗಮನದಲ್ಲಿಟ್ಟುಕೊಂಡು ಕೆಲಸಮಾಡಬೇಕಾಗುತ್ತದೆ.

1.00 ಪಿಎಂ

ಆದ್ದರಿಂದಲೇ ನಾನು ಹೇಳಿದ್ದು, ಜಸ್ಟೀಸ್ ಸಾವಂತ್ ಅವರ ಜೊತೆ ನಾನು ಇದನ್ನು ಚರ್ಚೆ ಮಾಡಿದ್ದೇನೆ. ಪಾರ್ಲಿಮೆಂಟ್ ಲೆವೆಲ್‌ನಲ್ಲಿ ಪಾರ್ಲಿಮೆಂಟರಿ ಅಮೆಂಡ್‌ಮೆಂಟ್ ಏನಾದರೂ ನಮ್ಮ ಕಾನೂನಿಗೆ ಬೇಕಾಗುತ್ತದೆಯೋ ಏನೋ ಎಂಬ ವಿಚಾರ ಕೂಡ ಚರ್ಚೆ ಮಾಡಿದ್ದೇವೆ. ಈ ದೂರುಗಳ ವಿಚಾರ ನಾನು ಆಗಲೇ ಹೇಳಿದ್ದೇನೆ. ಮಾನ್ಯ ಪ್ರಶ್ನೆಶ್ವರ ಹೆಗಡೆಯವರೂ ಕೂಡ ಹೇಳಿದ್ದಾರೆ. ಅದಕ್ಕೆ ಸಾಕಷ್ಟು ಸರಿಯಾದ, ನೇರವಾದ ತಕ್ಷಣದ ಪರಿಹಾರ ಸಿಗುತ್ತಿಲ್ಲ ಈಗಿನ ಚೌಕಟ್ಟಿನಲ್ಲಿ. ನಾವು ಒಂದೇ ವಿಚಾರ ಮಾಡಬಹುದು. ಅದು ಇಂಡೈರೆಕ್ಟಾಗಿ ಏನು ಮಾಡಬಹುದು ಎಂದರೆ ಇಂತಹ ಪತ್ರಿಕೆಗಳು ಬರೀ ಹೊಳ್ಳು ಆಪಾದನೆ ಏನು ಮಾಡುತ್ತವೆ ಶಾಸಕರ ವಿರುದ್ಧ ಅಥವಾ ಮತ್ತೊಬ್ಬರ ವಿರುದ್ಧವಾಗಲೀ ಅವರಿಗೆ ನಾವು ಅಡ್ವರ್ಟೈಸ್‌ಮೆಂಟ್ ಕೊಡುವುದಿಲ್ಲ ಎಂದು ಹೇಳಬಹುದು. ಅದರೆ ಅದು ಸರಿಯಾದ ಮಾರ್ಗ ಅಲ್ಲ ಎಂದು ನನಗೆ ಅನಿಸುತ್ತದೆ. ಅವರು ಮಾಡಿರುವಂತಹ ತಪ್ಪನ್ನು ಅವರಿಗೆ ತಿಳುವಳಿಗೆ ಮಾಡಿಕೊಡಬೇಕಾದರೆ ಈ ರೀತಿ ನಾವು ಮಾಡಬಾರದು. ಅದಕ್ಕೆ ಬೇರೆ ರೀತಿಯಾದ

ಕಾನೂನು ರೀತಿಯಲ್ಲೇ ಮಾಡಬೇಕಾಗುತ್ತದೆ. ಅದನ್ನು ಖಂಡಿತ ನಾವು ಪರಿಶೀಲನೆ ಮಾಡುತ್ತಿದ್ದೇವೆ. ಆದರೆ ಅದು ಸುಲಭದ ವಿಚಾರ ಅಲ್ಲ.

ಶ್ರೀ ಎನ್.ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೆ, ಈ ಅಡ್ವರ್‌ಟೈಸ್‌ಮೆಂಟ್ ಕೊಡದೇ ಇರುವುದಕ್ಕೂ ಅಪಪ್ರಚಾರಕ್ಕೂ ಏನಾದರೂ ಸಂಬಂಧ ಇದೆಯಾ ಎಂದು ಹೇಳುವಂತಹದು ಒಂದು. ಎರಡನೆಯದು ಎಲ್ಲಾ ಕಡೆಗಳಲ್ಲಿ ನಿಶ್ಚಿತವಾಗಿ ಜಿಲ್ಲಾ ಕೇಂದ್ರಗಳಲ್ಲಿ ಪತ್ರಿಕಾ ಭವನಗಳನ್ನು, ಪತ್ರಿಕಾ ಭವನದ ಕಟ್ಟಡಗಳನ್ನು ಕೊಡುವ ಬಗ್ಗೆ ರಾಜ್ಯ ಸರ್ಕಾರ ಏನಾದರೂ ಯೋಚನೆ ಮಾಡಿದೆಯಾ?

ಪ್ರೊ: ಬಿ.ಕೆ.ಚಂದ್ರಶೇಖರ್: ಅದರ ಬಗ್ಗೆ ತಾವು ಬೇರೆ ಪ್ರಶ್ನೆಯನ್ನು ಕಳುಹಿಸಬೇಕು. ಇದಕ್ಕೆ ಸಂಬಂಧ ಬರುವುದಿಲ್ಲ. ಖಂಡಿತ ನಾನು ಅಲ್ಲಿರುವಂತಹ ಅಂಕಿ ಅಂಶಗಳನ್ನೆಲ್ಲಾ ಕೊಡುತ್ತೇನೆ.

ಅಧ್ಯಕ್ಷರು: ಮಾನ್ಯ ರವೀಂದ್ರನಾಥ್ ಅವರೇ, ತಮ್ಮ ಪ್ರಶ್ನೆಗೆ ಇನ್ನೂ ಉತ್ತರ ಬಂದಿಲ್ಲ. ಉತ್ತರ ಬಂದ ಮೇಲೆ ತೆಗೆದುಕೊಳ್ಳುತ್ತೇನೆ. ನಾವು ಮುಂದಿನ ಸೋಮವಾರದ ಹೊತ್ತಿಗೆ ಉತ್ತರ ತರಿಸಿಕೊಳ್ಳಬಹುದು.

ಶ್ರೀ ಎಸ್.ಎ.ರವೀಂದ್ರನಾಥ್: ನಮ್ಮ ಪ್ರಶ್ನೆ ಬರುವುದೇ ಯಾವಾಗಲೋ ಅಪರೂಪಕ್ಕೆ ಒಮ್ಮೆ. ಆದರೂ ಸಹ ಉತ್ತರ ಬಂದಿಲ್ಲ ಎಂದರೆ ಹೇಗೆ?

ಅಧ್ಯಕ್ಷರು: ಲ್ಯಾಪ್ಸ್ ಏನೂ ಆಗುವುದಿಲ್ಲ. ಇನ್ನೂ ಎರಡು ಸೋಮವಾರ ಸಿಗುತ್ತದೆ. ಲ್ಯಾಪ್ಸ್ ಆಗುವುದಿಲ್ಲ. ಚಿಂತೆ ಮಾಡಬೇಡಿ.

ಶ್ರೀ ಎ.ಕೃಷ್ಣಪ್ಪ (ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಇಲಾಖೆ ಸಚಿವರು): ಮುಂದಿನ ವಾರದಲ್ಲಿ ಯಾವಾಗಲಾದರೂ ಪ್ರಶ್ನೆ ಹಾಕಲಿ, ನಾವು ತಯಾರಿದ್ದೇವೆ. ಉತ್ತರ ಕೊಡುತ್ತೇವೆ.

ಬ್ರಹ್ಮಾವರ ಕ್ಷೇತ್ರದಲ್ಲಿ ರಸ್ತೆ ಕಾಮಗಾರಿಗಳು.

177(1841)

ಶ್ರೀ ಜಯಪ್ರಕಾಶ್ ಹೆಗಡೆ ಕೆ.(ಬ್ರಹ್ಮಾವರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬ್ರಹ್ಮಾವರ ಕ್ಷೇತ್ರ ವ್ಯಾಪ್ತಿಯಲ್ಲಿ ಯಾವ ಯಾವ ರಸ್ತೆಗಳನ್ನು ಸರ್ಕಾರ ನಬಾರ್ಡ್